ಶ್ರೀ ಟಿ. ಮಾದಯ್ಯಗೌಡ.—ಬೆಂಗಳೂರು ಡಿವಿಜನ್ ಈಚೆಗೆ ಎರಡಾಗಿ ಬೈಫರ್‌ಕೇಟ್ ಆಗಿದೆ, ರಾಮನಗರ ಡಿವಿಜನ್ ಒಂದು, ಬೆಂಗಳೂರು ಡಿವಿಜನ್ ಒಂದು ಎಂದು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಇದು ರಾಮನಗರ ಸಬ್-ಡಿವಿಜನ್‌ಗೂ ಅನ್ವಯಿಸುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೌದು, ಅನ್ವಯಿಸುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೊಂದು ಡಿವಿಜನ್‌ನಲ್ಲಿ ಒಂದು ವರ್ಷಕ್ಕೆ ಈಗಿರತಕ್ಕ ಸಿಬ್ಬಂದಿಯಿಂದ ಎಷ್ಟು ಅಂದಾಜುಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ ?

ಶ್ರೀ ಆಲೂರು ಹನುಮಂತಪ್ಪ.—1962ರ ವರೆಗೂ ಒಂದು ವರ್ಷಕ್ಕೆ ಒಂದು ಜಿಲ್ಲೆಗೆ ಸುಮಾರು 60 ಎಸ್ಟಿಮೇಟ್‌ನಂತೆ ತಯಾರು ಮಾಡಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಮೈನರ್ ಇರಿಗೇಷನ್ ಗಾಗಿ ಹೆಚ್ಚಿನ ಎಸ್ಟಿಮೇಟ್‌ಗಳನ್ನು ತಯಾರು ಮಾಡಬೇಕು, ಪ್ರಾಜೆಕ್ಟುಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ಅವರಿಗೆ ಒಂದು ಟಾರ್ಗೆಟ್ ಕೊಟ್ಟಿದ್ದೇವು. ಒಂದು ವರ್ಷಕ್ಕೆ ಒಂದೊಂದು ಜಿಲ್ಲೆಯಲ್ಲಿ ಸುಮಾರು 400 ಎಸ್ಟಿಮೇಟ್‌ಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗಿದೆ, ಅವನ್ನು ಮಾಡಿ ಮುಗಿಸಬೇಕೆಂದು ಹೇಳಿದ್ದಾರೆ, ಮಾಡುತ್ತಾ ಇದ್ದಾರೆ.

ಶ್ರೀ ಟಿ. ಮಾದಯ್ಯಗೌಡ.—ಬೆಂಗಳೂರು ಡಿವಿಜನ್‌ನಲ್ಲಿ ಎರಡು ಡಿವಿಜನ್‌ಗಳು ಇವೆ, ಅದರಲ್ಲಿ ರಾಮನಗರ ಡಿವಿಜನ್‌ನಲ್ಲಿ ಎಷ್ಟು ಕೆಲಸವಾಗಿದೆ ? ಬೆಂಗಳೂರು ಡಿವಿಜನ್‌ನಲ್ಲಿ ಎಷ್ಟು ಕೆಲಸ ಪಾಗಿದೆ ; ಪ್ಲಾನ್ ಮತ್ತು ಎಸ್ಟಿಮೇಟು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಎರಡ್ಕಾ ಭಾಗದಲ್ಲೂ ಎಸ್ಟಿಮೇಟು ರೆಡಿಯಾಗಿದೆ, ಆಗುತ್ತಾ ಇದೆ, ಅದಕ್ಕೆ ಬೇರೆ ಒಂದು ಪ್ರಶ್ನೆಯನ್ನು ಕೇಳಿದರೆ ವಿವರ ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಮೈನರ್ ಇರಿಗೇಷನ್ ಟೆಂಪೋ ಇನ್‌ಕ್ರೀಸ್, ಹೆಚ್ಚು ಎಸ್ಟಿಮೇಟ್ ತಯಾರು ಮಾಡಬೇಕಾದರೆ ಕೇಂದ್ರದಿಂದ ಹೆಚ್ಚು ಸಹಾಯ ಪಡೆದು ಹೆಚ್ಚು ಆಹಾರ ಉತ್ಪನ್ನ ಮಾಡಬೇಕಾದರೆ ಬೆಂಗಳೂರು, ತುಮಕೂರು ಮತ್ತು ಕೋಲಾರ ಬಹು ಹೆಚ್ಚಿನ ಅಭಾವ ಪ್ರದೇಶವಾಗಿರುವುದರಿಂದ ತುಮಕೂರು ಮತ್ತು ಬೆಂಗಳೂರಿಗೆ ಒಂದೊಂದು ಪ್ರತ್ಯೇಕ ಡಿವಿಜನ್‌ಗಳನ್ನು ಮಾಡಿ ಕೆಲಸಗಳನ್ನು ತ್ವರಿತವಾಗಿ ಮಾಡುವುದಕ್ಕೆ, ವೇಗವನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಯಾವುದಾದರೂ ಕ್ರಮವನ್ನು ಕೈಕೊಳ್ಳಬೇಕೆಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೊಸದಾಗಿ ಡಿವಿಜನ್ ಮಾಡಬೇಕಾದ ಪ್ರಮೇಯ ಕಾಣುವುದಿಲ್ಲ, ಹೊಸದಾಗಿ ಪ್ರಾಜೆಕ್ಟುಗಳನ್ನು ಮಾಡಬೇಕಾದ ಸಂದರ್ಭ ಕಂಡು ಬಂದಾಗ ಹೊಸದಾಗಿ ಸಿಬ್ಬಂದಿ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಆಲೋಚನೆ ಮಾಡುತ್ತಾ ಇದೆ. ಅದನ್ನು ಅವರು ಮಾಡುತ್ತಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಮೈನರ್ ಇರಿಗೇಷನ್ ಸಬ್-ಡಿವಿಜನ್ ಪ್ರಾರಂಭವಾಗಿ ಒಂದು ವರ್ಷವಾದರೂ ಸಿಬ್ಬಂದಿ ಕಡಿಮೆ ಇರುವುದರಿಂದ ಕೆಲಸ ಕಾರ್ಯಗಳು ನಡೆಯುವುದಕ್ಕೆ ತೊಂದರೆಯಾಗುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅವಶ್ಯಕತೆ ಕಂಡ ಕಡೆ ಹೆಚ್ಚು ಸಿಬ್ಬಂದಿ ಕೊಡಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ.

ಶ್ರೀ ಇ. ನಾರಾಯಣ ಗೌಡ.—ಬೆಂಗಳೂರು ಸರ್ಕಲ್‌ನಲ್ಲಿ ಕೆಲವು ಡಿವಿಜನ್‌ಗಳಲ್ಲಿ ಈಗಾಗಲೇ ಸಣ್ಣ ನೀರಾವರಿಗೆ ಹಣ ಖರ್ಚಾಗಿ ಹೋಗಿದೆ; ಆದ್ದರಿಂದ ತಾತ್ಕಾಲಿಕವಾಗಿ ಕೆಲಸ ನಿಲ್ಲಿಸಬೇಕೆಂದು ಸರ್ಕಾರದ ಆದೇಶ ಇದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆದೇಶ ಇಲ್ಲ, ಹಣ ಮುಗಿಯುತ್ತಾ ಬಂದಿದೆ, ಬಹಳ ವೇಗವಾಗಿ ಕೆಲಸ ಕಾರ್ಯಗಳು ನಡೆಯುತ್ತಾ ಇವೆ, ಹೆಚ್ಚು ಹಣ ಬೇಕೆಂದು ಕೇಳುತ್ತಾ ಇದ್ದಾರೆ, ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಕೊಡಬೇಕೆಂದು ಸರ್ಕಾರದವರು ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಬೆಂಗಳೂರು ಡಿವಿಜನ್ ಒಂದರಲ್ಲೇ ಸುಮಾರು ಎಷ್ಟು ಸಣ್ಣ ನೀರಾವರಿ ಕಾಮಗಾರಿಗಳ ಕೆಲಸಗಳ ಬಗ್ಗೆ ಅಂದಾಜು ಮಾಡುವುದು ಬಾಕಿ ಇದೆ ಎಂಬುದಕ್ಕೆ ಅಂಕಿಅಂಶಗಳನ್ನು ಒದಗಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಸ್ಟರ್ ಪ್ಲಾನ್ ಮಾಡುವ ಉದ್ದೇಶದಿಂದ ಬೆಂಗಳೂರು ಸರ್ಕಲ್‌ನಲ್ಲಿ ಎಕ್ಸಿಕ್ಯೂಟೀವ್ ಇಂಜನಿಯರು ಮತ್ತು ಸಿಬ್ಬಂದಿಯವರು ಎಲ್ಲಾ ಅಂಕಿಅಂಶಗಳನ್ನೂ ಶೇಖರಣೆ ಮಾಡಿದ್ದಾರೆ, ಆ ಬಗ್ಗೆ ಸುಮಾರು 4,800 ಕೆಲಸಗಳು ಇನ್‌ವೆಸ್ಟಿಗೇಟ್ ಆಗಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಮ್ಮೆ ಈ ಸಭೆಯಲ್ಲಿ 6,000 ಕೆಲಸಗಳನ್ನು ಎಸ್ಟಿಮೇಟ್ ಮಾಡಬೇಕಾಗಿದೆ ಎಂದು ಉತ್ತರ ಹೇಳಿದಿರಿ, ಆ 6,000 ಕೆಲಸಗಳ ಎಸ್ಟಿಮೇಟ್ ತಯಾರು ಮಾಡು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವುದಕ್ಕೆ ಈಗಿರತಕ್ಕ ಸಿಬ್ಬಂದಿಯವರಿಗೆ ಎಷ್ಟೋ ಕಾಲ ಬೇಕಾಗಬಹುದು, ಆದ್ದರಿಂದ ಇನ್ನೊಂದು ಡಿವಿಜನ್ ಕ್ರಿಯೇಟ್ ಮಾಡುವುದಕ್ಕೆ ಸಾಧ್ಯವಿಲ್ಲವೇ ?

Mr. SPEAKER.—Is the Hon'ble Member satisfied that it is a proper supplementary ? The question relates to a particular area. If he is satisfied, he may put it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರು, ತುಮಕೂರು ವತ್ತು ಕೋಲಾರದ ಪ್ರಶ್ನೆ ಬಂದಿರುವುದರಿಂದ, ಮೈನರ್ ಇರಿಗೇಷನ್ ಚೆಂಪೋ ಇನ್‌ಕ್ರೀಸ್ ಮಾಡುವುದಕ್ಕೆ ಕೋಲಾರದ ಕೆಲವು ಭಾಗ ಮತ್ತು ತುಮಕೂರಿನ ಕೆಲವು ಭಾಗಗಳಲ್ಲಿ ನಾವ್ಯೂವರೆ ಸಾವಿರಕ್ಕಿಂತ ಹೆಚ್ಚು ಕೆಲಸಗಳ ಎಸ್ಟಿಮೇಟ್ ಮಾಡಬೇಕಾಗಿರ ವುದರಿಂದ ತುಮಕೂರಿನಲ್ಲಿ ಒಂದು ಡಿವಿಜನ್ ಕ್ರಿಯೇಟ್ ಮಾಡುವುದಕ್ಕೆ ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗಿರತಕ್ಕ ಮೈನರ್ ಇರಿಗೇಷನ್ ಸಿಬ್ಬಂದಿ ಜೊತೆಗೆ, ಮಳೆಗಾಲದಲ್ಲಿ ಯಾವಾಗ ಕೆಲಸ ನಡೆಯುವುದಿಲ್ಲವೋ ಆಗ ರೆಗ್ಯುಲರ್ ಸಿಬ್ಬಂದಿಯವರನ್ನೂ ಉಪಯೋಗಿಸಿಕೊಂಡು ಅದಷ್ಟು ಬೇಗ ಎಸ್ಟಿಮೇಟು ಮುಂತಾದುವುಗಳನ್ನು ತಯಾರು ಮಾಡುತ್ತಾ ಇದ್ದೇವೆ, ಜೊತೆಗೆ ಮಾನ್ಸರ್ ಪ್ಲಾನ್ ತಯಾರು ಮಾಡಬೇಕಾಗಿದ್ದರೆ ಅದಕ್ಕೆ ಸಿಬ್ಬಂದಿ ಜಾಸ್ತಿ ಬೇಕಾಗುತ್ತದೆ. ಅದನ್ನೂ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ, ಸಿಬ್ಬಂದಿ ಎಷ್ಟು ಬೇಕು ಎಂಬುದು ವರ್ಕ್‌ಲೋಡ್ ಮೇಲೆ ಹೋಗುತ್ತದೆ; ಅದನ್ನು ಸರ್ಕಾರ ಪರಿಶೀಲನೆ ಮಾಡಿ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಟಿ. ಮಾದಯ್ಯ ಗೌಡ —ಈಗ ಇರತಕ್ಕ ಸ್ಪೆಷಲ್ ಡಿವಿಜನ್ ಟ್ಯಾಂಕ್ ರಿಜಿಷ್ಟ್ರಗಳನ್ನು ಸರ್ವೆ ಮಾಡಿ ಅವನ್ನು ಮುಗಿಸುವುದರಲ್ಲೇ ತಲ್ಲೀನವಾಗಿ ಬೇರೆ ಕೆಲಸಗಳೊಂದನ್ನೂ ಮಾಡುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಭಾಗಗಳಲ್ಲಿ ಈಗಾಗಲೇ ಈ ಕೆಲಸ ಮುಗಿದಿದೆ. ರಾಯಚೂರು ಜಿಲ್ಲೆಯಲ್ಲಿ ಟ್ಯಾಂಕ್ ಸರ್ವೆ ಕೆಲಸ ಮುಗಿದಿದೆ. ಅವರು ಟ್ಯಾಂಕ್ ರಿಜಿಷ್ಟ್ರುಗಳನ್ನು ಕಳುಹಿಸಿದ್ದಾರೆ. ಬಾಕಿ ಕಡೆಗಳಲ್ಲೂ ಕೂಡ ಮುಕ್ಕಾಲುಮೂರುಪಾಲಿನ ಕೆಲಸ ಮುಗಿದಿದೆ. ಎಲ್ಲ ಕಡೆಗೂ ಮಾಸ್ಟರ್ ಪ್ಲಾನನ್ನು ತಯಾರುಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಒಟ್ಟು ಸ್ಕೇಟಿನಲ್ಲಿರುವ ಮೈನರ್ ಇರಿಗೇಷನ್ ಡಿವಿಜನ್‌ಗಳಲ್ಲಿ ಅಂದಾಜುಗಳ ಸ್ಕ್ರೂಟಿನಿ ಕೆಲಸ ಮತ್ತು ಅಂದಾಜು ತಯಾರಿನಕ್ಕೆ ಕೆಲಸ ಕಾಲಕ್ಕೆ ಸರಿಯಾಗಿ ಆಗುತ್ತಿಲ್ಲವಾದ್ದರಿಂದ ಈ ಇನ್‌ವೆಸ್ಟಿಗೇಷನ್ನಿಗೇ ಒಂದು ಪ್ರತ್ಯೇಕ ಡಿವಿಜನ್ನನ್ನು ತೆರೆಯುವ ಆಲೋಚನೆ ಸರ್ಕಾರಕ್ಕಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದರ ಆಗತ್ಯವಿದ್ದಂತೆ ಕಂಡುಬರುವುದಿಲ್ಲ.

ಶ್ರೀ ಐ. ನಾರಾಯಣ ಗೌಡ.—ಪಾಲಾರ್ ಸೀರೀಸ್ ಕೆರೆಗಳೆಲ್ಲಾ ಹೂತುಹೋಗಿರುವುದರಿಂದ ಇವುಗಳನ್ನು ರಿಪೇರಿ ಮಾಡಲು ವಿದ್ಯಾನ್ ಸರ್ಕಾರದವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕೆಲ್ಲ ಮೋದಲೇ ಏರ್ಪಾಡುಗಳನ್ನು ಮಾಡಲಾಗಿದೆ. ಟ್ಯಾಂಕ್ ರಿಜಿಸ್ಟ್ರಗಳ ಸರ್ವೆ ಕೆಲಸ ಮುಗಿದ ಕೂಡಲೇ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ.

Sri C. J. MUCKANNAPPA.—Please allow me one more question.

Mr. SPEAKER.—Is it a supplementary ? The Hon'ble Member should not re-open the question one way or the other.

Sri C. J. MUCKANNAPPA.—The Chief Minister said sometime ago that in order to get more funds, he had asked the Department to prepare a master plan and that any amount required would be given. What has happened to that ?

Mr. SPEAKER.—The Chief Minister also said that they had a plan for 40 crores for increasing food production.

Total amount of arrears of Motor Vehicle Taxes and Surcharge in South Kanara District since 1960.

*Q.—872. Sri S. GOPALA SALENNA (Mudabidri).—

Will the Government be pleased to state :—

(*a*) the total amount of arrears of Motor Vehicle Taxes and Surcharge in South Kanara District since the beginning of the year 1960 up-to-date ;

(*b*) the total number of motor companies owners and operators of vehicles from whom the arrears of motor vehicle taxes and surcharges are due in South Kanara from the beginning of the year 1960 ;

(*c*) the number of prosecutions filed for non-payments of motor vehicle taxes and surcharges with a list of names and amount due from each since the beginning of the year 1 60 in the said district ;

(*d*) the number of cases withdrawn without collection of motor vehicle taxes and surcharges demanded from the beginning of the year 1960 in the above district ?

*A.—Sri R. M. PATIL (Minister for Home).—

(*a*) Particulars of Motor Vehicle Taxes and Surcharges in arrears in South Kanara District from 1960-61 are as follows :—

Year	Motor Vehicle Taxes	SURCHARGE		Total
		Under the erstwhile Madras Motor Vehicles (T.P.G.) Act, 196	Under Mysore Motore Vehicles (T.P.G.) Act, 1961	
	Rs. nP.	Rs. nP.		Rs. nP.
1960-61	41,031-60	11,941-95 (arrears of previous years)	...	11,941-95
1961-62	16,655-75	...	5,483-89	5,483-89
1962-63	1,97,091-45	...	13,937-36	13,937-36
1963-64	*...	...	**1,361-94	1,361-94

(*b*) Mortor Vehicle Taxes 1,462. Surcharge 92

(*c*) 30 (details as per the Statement given below :).

(*d*) Nil.

*Taxes under the Motor Vehicles Taxation Act are recovered either on quarterly, half-yearly or yearly basis. The accounts for the quarter ended 30th June 1963 are still to be finalised.

**This relates to arrears up to 31st August 1963.

STATEMENT.

Number of Prosecutions proposed and filed for non-payment of Motor Vehicle Taxes with the List of Names and Amount due since the beginning of 1960.

Sl. No.	Vehicle Number	Name of the Owner	Amount due	Period	Remarks
			Rs.		
1	MYW 1434	Shri D. Veigas, Balmatta, Mangalore ...	252-00	1-10-57 to 31-12-62	
2	,, 252	,, U. Abdul Latiff, Udipi ...	120-00	1-10-61 to 31-12-62	
3	,, 3039	,, Chandrahas Nayak, M/s. Kanara Tile Works, Boloor, Mangalore ...	60-00	1-1-62 to 31-3-63	
4	,, 489	,, K. Yellapa Devidiga, Basavangudi, Mangalore ...	210-00	1-7-62 to 31-3-63	
5	,, 305	,, P. Ananda Rao, Mangalore ...	570-00	Q. E. 30-6-58 and 1-10-58 to 31-3-63	
6	,, 945	,, Salvadore Mathias, Belman ...	180-00	1-1-62 to 30-6-63	
7	,, 1570	,, B. Thyampanna Shetty, Clay Merchant, Boloor, Mangalore ...	90-00	Q. E. 30-9-62 and 1-1-63 to 30-6-63	
8	,, 2400	,, T. B. Mohammed Kunhi, Contractor, Vishwa Bhavan, Mangalore ...	150-00	1-4-62 to 30-6-63	
9	MYE 590	,, K. S. Ram Bhat, Haradi, Puttur ...	60-0	1-10-62 to 31-3-63	
10	MYW 19	,, K. S. Holla & Sons, Mangalore-1 ...	84-00	Q. E. 31-12-61 and 1-10-62 to 30-6-63	
11	MYW 2326	,, Ramdas Mallya, Kumbashi Post Coondapur	90-00	1-1-61 to 30-6-63	
12	MYW 1488	,, B. Thyampanna Shetty, Boloor, Mangalore	300-00	1-4-57 to 30-6-63	

13	BMF	2395	„	Abdul Latiff, Badagubet, Udipi ...	45–00	Q. E. 31–12–61 and 1– 7–62 to 30– 6–63
14	MYW	217	„	A. Koragappa, Attavar, Mangalore ...	0	1– 1–61 to 30– 6–63
15	MYW	371	„	U. B. Abdul Khader, Ullal ...	240–0	1– 7–61 to 30– 6–63
16	MYW	639	„	M. Salvadduin, Kembar, Mangalore ...	180–00	1– 4–62 to 30– 9–63
17	„	2847	„	M. Keshava Bhat, Mahamaya Temple, Puttur ...	240–00	1–10–61 to 30– 9–63
18	„	1573	„	Andrew Saldanha, Aikala Village ...	195–00	1– 7–62 to 30– 9–63
19	„	112	„	A. Veigas, Balmatta, Mangalore ...	175–60	1– 8–60 to 31– 8–60
20	„	566	„	K. S. Gowda, Aryapu Village, Puttur ...	958–00	1– 7–62 to 31–12–62
21	„	1609	„	B. Thyampanna Shetty, Bolar, Mangalore ...	...	Q. E. 31– 3–63 (The prosecution is confined to only late payment of tax and as such no amount has been indicated)
22	„	733	„	T. Vittal Shetty, Surathkal ...	439–00	Q. E. 30– 9–62
23	„	1314	„	Moidin Ibrahim Hezmadi ...	1,844–00	1– 7–62 to 30– 6–63
24	„	1945	„	K. Thimmappa Shetty, Shetty Motor Service, Mangalore ...	1,300–00	Q. E. 30– 9–62
25	„	1177	„	A. Balappa, K. S. Rao Road, Mangalore	1,919–00	1–10–62 to 30–6–63
26	„	1101	„	K. V. Nayak, Gollakeri Street, Mangalore-1	360–00	2–12–60 to 31–12–62 (Difference of tax)
27	„	467	„	K. S. Shetty, Vishwa Bhavan, Mangalore..	1,180–80	1– 4–57 to 30– 7–58
28	„	596	„	B. S. Soorappa Shetty, Coondapur ...	989–00	1–10–62 to 31– 3–63 (D. C., SK. addressed to recover under R. R. Act).
29	MYV	935	Smt.	R. Heggadthi, Ambalpady, Udipi ...	2,528–00	1– 7–62 to 30– 9–63
30	„	525	M/s.	B. V. Baliga & Sons, Modanthiar ...	2,394–00	1– 7–62 to 30– 9–63

ಶ್ರೀ ಎಸ್. ಗೋಪಾಲ ಸಾರೆನ್ನ.—ಇಲ್ಲಿ ಸೂಚಿಸಿರತಕ್ಕ 30 ಕೇಸುಗಳಲ್ಲಿ ತೀರ್ಪೆ ಆದವುಗಳೆಷ್ಟು; ವಜಾ ಆದವುಗಳೆಷ್ಟು ?

† Sri R. M. PATIL.—They are still pending. They are not disposed of.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಇಲ್ಲಿ ಸೂಚಿಸಿರತಕ್ಕ 1,462 ಕೇಸುಗಳಲ್ಲಿ ಕೇವಲ 30 ಕೇಸುಗಳು ಮಾತ್ರ ಡಾಖಲಾಗಿವೆ, ಏಕೆ ?

ಶ್ರೀ ಆರ್. ಎಂ. ಪಾಟೀಲ್.—ಇಲ್ಲಿರತಕ್ಕ ಪ್ರಶ್ನೆ ಇಷ್ಟೆ, ಈ ಹಿಂದೆ ಇದ್ದ ಆಕ್ಟ್ ಮತ್ತು ರೂಲ್ಸ್ ಪ್ರಕಾರ ಇಲ್ಲಿರತಕ್ಕ ವೆಹಿಕಲ್‌ಗಳ ಮಾಲೀಕರೇನಿದ್ದಾರೆಯೋ ಅವರು ಎಲ್ಲೆಲ್ಲಿ ವಾಸವಾಗಿದ್ದರೋ ಅಲ್ಲಲ್ಲೇ ಅವರು ಅವರ ಸರಹದ್ದಿನಲ್ಲಿ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕು, ಅಲ್ಲೇ ಅವರು ಲೈಸೆನ್ಸ್ ಫೀ ಕೊಡಬೇಕು ಎಂಬ ನಿಯಮ ಇರಲಿಲ್ಲ. ಈಗ ಅದನ್ನು ತಿದ್ದಪಡಿಸಲಾಗಿದೆ

They could be anywhere throughout the State and as such it is difficult to find how many vehicles have not been renewed so far as licences are concerned. In order to pinpoint the matter, Rule 9(8) has been introduced and separate staff will be appointed.

Sri C. J. MUCKANNAPPA.—How many vehicles are being operated without licence or without payment of tax ?

Sri R. M. PATIL.—They are only defaulters. Cases have been launched.

Number of applications for Grant of Lands for Village Extension in Tumkur Taluk.

*Q.—914. Smt. G. C. BHAGEERATHAMMA (Tumkur).—

Will the Government be pleased to state :—

the Villages in Tumkur Taluk whose residents have applied for grant of lands for extension of the villages ?

A.—Sri M. V. KRISHNAPPA (Minister for Revenue).—

Sixty (60) as per statement given below.

STATEMENT,

Showing number of villages where the villagers have requested for acquisition of lands for Village Extension in Tumkur Taluk.

Sl. No.	Name of Hobli	Name of village	S.No.	Extent	Remarks
1	Kasaba ...	Kuppur ...	95-2	5-28	
2	Gulur ...	Chikkasirangi ...	2, 4, 5	3-0	
3	Kora ...	Hanumanthinagiri ...	1/8	1-8	
4	Gulur ...	Helakal ...	146/4	0-25	
5	Kora ...	Chikkagundagal ...	78/1, 3	3-0	
6	Bellavi ...	Bugudanahalli ...	38	3-0	
7	Kora ...	Chikkonahalli ...	75	3-0	